KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

NAAC Accredited
'A' Grade 2022

website: kud.ac.in

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

No. KU/Aca(S&T)/GM-Gen/2022-23/1314 Date: 21 NOV 2023

## ಜ್ಞಾಪಕೋಲೆ-1

ವಿಷಯ: ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಪದವಿ ಮಹಾವಿದ್ಯಾಲಯಗಳಲ್ಲಿ 2022-23ನೇ ಸಾಲಿನಲ್ಲಿ ಸ್ನಾತಕ ಪದವಿ ಕೋರ್ಸುಗಳಿಗೆ UUCMS ಮುಖಾಂತರ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿ ಮತ್ತು ಇತರೆ ಶುಲ್ಕವನ್ನು ಜಮೆ ಮಾಡುವ ಕುರಿತು.

ಉಲ್ಲೇಖ:1. ಕಚೇರಿ ಸುತ್ತೋಲೆ ಸಂ. KU/Aca(S&T)/GM-Gen/2022-23/1700, ದಿನಾಂಕ: 14.02.2023.
2. ಕಚೇರಿ ಸುತ್ತೋಲೆ ಸಂ. KU/Aca(S&T)/GM-Gen/2022-23/476, ದಿನಾಂಕ: 26.06.2023.
3. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 16.02.2023 ಮತ್ತು ದಿನಾಂಕ:

------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಒಟ್ಟು 273 ಪದವಿ ಮಹಾವಿದ್ಯಾಲಯಗಳಲ್ಲಿ UUCMS ಮುಖಾಂತರ 2022-23ನೇ ಸಾಲಿನಲ್ಲಿ ಸ್ನಾತಕ ಪದವಿ ಪ್ರವೇಶ ಪಡೆಯಲಾಗಿರುತ್ತದೆ. ಈ ಮಹಾವಿದ್ಯಾಲಯಗಳ ಪೈಕಿ 55 ಮಹಾವಿದ್ಯಾಲಯಗಳಿಂದ ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಬೇಕಾದ ಮೊತ್ತದ ವಿವರಗಳ ಯಾದಿಯನ್ನು ಈಗಾಗಲೇ ಉಲ್ಲೇಖಿತ 1 ಹಾಗೂ 2ರ ಸುತ್ತೋಲೆಯ ಮುಖಾಂತರ ತಿಳಿಸಲಾಗಿರುತ್ತದೆ.

ಅದರಂತೆ, ಸಂಬಂಧಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರುಗಳಿಗೆ ಈ ಮೂಲಕ ಪುನಃ ತಿಳಿಸುವುದೇನೆಂದರೆ, ಈ 55 ಮಹಾವಿದ್ಯಾಲಯಗಳ ಪೈಕಿ ಇನ್ನೂ ಕೆಲ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯಕ್ಕೆ ಭರಿಸುವ ದರದ ಶುಲ್ಕವನ್ನು ಇನ್ನೂವರೆಗೂ ಭರಿಸಿರುವುದಿಲ್ಲ. ಆದ್ದರಿಂದ, ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ವಿದ್ಯಾಮಂಡಳ (ಎಸ್&ಟಿ) ವಿಭಾಗದ ದೃಢೀಕರಣದೊಂದಿಗೆ ವಿತ್ತಾಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಹೆಸರಿನಲ್ಲಿ ಅಗತ್ಯವಾಗಿ ಭರಿಸುವ ಶುಲ್ಕವನ್ನು ಡಿ.ಡಿ. ಮುಖಾಂತರ ಈ ಸುತ್ತೋಲೆ ಮುಟ್ಟಿದ ದಿನಾಂಕ: 30.11.2023ರ ಒಳಗಾಗಿ ಕಡ್ಡಾಯವಾಗಿ ಭರಿಸಲು ಪುನಃ ತಿಳಿಯಪಡಿಸಿದೆ. ಮುಂದುವರೆದು, ಸದರಿ ದಿನಾಂಕದಂದು ಮಹಾವಿದ್ಯಾಲಯದವರು ವಿಶ್ವವಿದ್ಯಾಲಯಕ್ಕೆ ಭರಿಸುವ ದರದ ಶುಲ್ಕವನ್ನು ಬರಸದೇ ಇದ್ದಲ್ಲಿ ವಿದ್ಯಾರ್ಥಿಗಳ ಫಲಿತಾಂಶ ತಡೆಹಿಡಿಯುವ ಇತ್ಯಾದಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಎಂದೂ ಸಹ ತಿಳಿಯಪಡಿಸಿದೆ.

ಅಡಕ: ಮೇಲಿನಂತೆ

ಕುಲಸಚಿವರು.

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ. (ಕ.ವಿ.ವಿ. ಅಂತರ್ಜಾಲ ಹಾಗೂ ಮಿಂಚಂಚೆ ಮೂಲಕ ಬಿತ್ತರಿಸಲಾಗುವುದು)

**ಪ್ರತಿ:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
6. ನೋಡಲ್ ಅಧಿಕಾರಿಗಳು, UUCMS ಘಟಕ, ಕ.ವಿ.ವಿ. ಧಾರವಾಡ.